## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಶ್ರೀ ಶಂಕರಪ್ಪ,(ನಿವೃತ್ತ)ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಶ್ರೀ ಸೀತಾರಾಮು, ಪಿ.ಡಿ.ಓ, ಇವರುಗಳ ವಿರುದ್ಧ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸಿನಂತೆ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಆದೇಶ.

ಓದಲಾಗಿದೆ:-ಮಾನ್ಯ ಉಪ ಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.12(3)ರಡಿ ಸಲ್ಲಿಸಿರುವ ವರದಿ ಸಂಖ್ಯೆ: ಕಂಪ್ಲೆಂಟ್/ ಉಪಲೋಕ್/ಬಿಡಿ-916/2015/ಸನಿಕಾಸ-2, ದಿನಾಂಕ:03-04-2017.

-000-

ಪ್ರಸ್ತಾವನೆ:

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ:28-04-2017ರ ಅ.ಸ.ಪತ್ರದಲ್ಲಿ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರ ದಿನಾಂಕ:03-04-2017ರ ವರದಿ ಮತ್ತು ಇತರೆ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸುತ್ತಾ, ಸರ್ಕಾರದ ನಿರ್ಣಯವನ್ನು ಲೋಕಾಯುಕ್ತ ಕಛೇರಿಗೆ ಸಲ್ಲಿಸಲು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಕೆ.ಡಿ. ನಾಯಕ್, ಶಾಂತಿನಗರ, ನೆಲಮಂಗಲ ಇವರು ತಮ್ಮ ದೂರಿನಲ್ಲಿ ಕೆಳಗೆ ವಿವರಿಸಿರುವ (2) ಜನ ಅಧಿಕಾರಿ/ನೌಕರರ ವಿರುದ್ಧ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದೆ ಎಂದು ವರದಿಸಿರುತ್ತಾರೆ.

| ಕ್ರ. ಸಂ. | ಎದುರುದಾರರ ಹೆಸರು ಮತ್ತು ವಿವರ | ಎದುರುದಾರರ ಸಂಖ್ಯೆ |
|---|---|---|
| 1 | ಶ್ರೀ ಸಿ. ಶಂಕರಪ್ಪ, (ನಿವೃತ್ತ) ಕಾರ್ಯನಿರ್ವಾಹಕ ಅಧಿಕಾರಿ,ತಾಲ್ಲೂಕು ಪಂಚಾಯಿತಿ, ನೆಲಮಂಗಲ | 1 |
| 2 | ಶ್ರೀಸೀತಾರಾಮು,ಪಿ.ಡಿ.ಓ, ಯಂಟಗಾನಹಳ್ಳಿ ಗ್ರಾಮ ಪಂಚಾಯಿತಿ | 2 |

ದೂರಿನ ಸಂಕ್ಷಿಪ್ತ ವಿವರಣೆ:

- ದೂರುದಾರರು ತಮ್ಮ ದೂರಿನಲ್ಲಿ ಶ್ರೀಮತಿ ಎಂ.ಮಧುಮತಿ ಕೋಂ ಎಂ.ವಿ. ಕುಮಾರ್, ಶಾಂತಿನಗರ, ಮಲ್ಲರಬಾಣವಾಡಿ ಅಂಚೆ, ನೆಲಮಂಗಲ ತಾಲ್ಲೂಕು, ಅವರು ಅನಧಿಕೃತವಾಗಿ ಚರಂಡಿ ಮೇಲೆ ಪಂಚಾಯತಿ ನಿಯಮವನ್ನು ಉಲ್ಲಂಘಿಸಿ ಮನೆಯನ್ನು ಕಟ್ಟುತ್ತಿದ್ದು, ಅದನ್ನು ನಿಲ್ಲಿಸಬೇಕೆಂದು, ದಿನಾಂಕ:10-11-2014, 05-02-2015 ರಂದು ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿಗೆ ದೂರು ಸಲ್ಲಿಸಿದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಶ್ರೀಮತಿ ಮಧುಮತಿಯವರು ಸಾರ್ವಜನಿಕವಾಗಿರುವ ಚರಂಡಿ ಮೇಲೆ ಮನೆ ಕಟ್ಟುತ್ತಿರುವುದರಿಂದ ಬೀದಿ ನೀರಿನ ಕೊಳಾಯಿಯನ್ನು ತಮ್ಮ ಮನೆ ಒಳಗೆ ಸೇರಿಸಿ ಕಟ್ಟಿಕೊಂಡಿದ್ದು, ಕುಡಿಯುವ ನೀರಿನ ಜಾಗದಲ್ಲಿಯೇ ಶೌಚಾಲಯವನ್ನು ಕಟ್ಟಿಕೊಂಡಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ಸದರಿ ಕಟ್ಟಡವನ್ನು ತಡೆಯಬೇಕೆಂದು ದೂರು ಸಲ್ಲಿಸಿರುವುದಾಗಿ ವರದಿಸಿರುತ್ತಾರೆ.

..2

- ಎದುರುದಾರರ ಆಕ್ಷೇಪಣೆ ಕೋರಿ ನೋಟೀಸು ಕಳುಹಿಸಿದ್ದು, ಅವುಗಳು ತಲುಪಿದ ಬಗ್ಗೆ ಸ್ವೀಕೃತಿಗಳು ಬಂದಿರುತ್ತವೆ. ಆದರೆ ಎದುರುದಾರರು ಆಕ್ಷೇಪಣೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಎದುರುದಾರರ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಲಾಗಿದೆ ಎಂದು ವರದಿಸಿರುತ್ತಾರೆ.

ಕಡತ ಹಾಗೂ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಕಂಡು ಬರುವ ಅಂಶಗಳೇನೆಂದರೆ:- ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಶ್ರೀಮತಿ ಎಂ.ಮಧುಮತಿ ಎನ್ನುವವರು ಖಾತೆ ನಂ.3 ಬಿ/3ರಲ್ಲಿ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಮಂಜೂರಾದ ಮನೆಯನ್ನು ಕಟ್ಟುತ್ತಿದ್ದು, ಆದರೆ ಅನಧಿಕೃತವಾಗಿ ಸಾರ್ವಜನಿಕ ಚರಂಡಿ ಮೇಲೆ ಮನೆ ಕಟ್ಟುತ್ತಿದ್ದಾರೆಂದು ಅದನ್ನು ತಡೆಗಟ್ಟಲು ಎದುರುದಾರರಿಗೆ ದೂರುದಾರರು ದಿನಾಂಕ: 10-11-2014ರಂದು ಅರ್ಜಿ ಸಲ್ಲಿಸಿರುತ್ತಾರೆ. ಅದೇ ರೀತಿ ಪಿಎಸ್.ಐ., ನೆಲಮಂಗಲ ಠಾಣೆ ಇವರಿಗೂ ಸಹ ಈ ಅನಧಿಕೃತ ಕಟ್ಟಡವನ್ನು ತಡೆಗಟ್ಟಬೇಕೆಂದು ದೂರು ಸಲ್ಲಿಸಿರುವುದಾಗಿ ವರದಿಸಿರುತ್ತಾರೆ.

2ನೇ ಎದುರುದಾರರಾದ ಶ್ರೀ ಸೀತಾರಾಮು, ಪಿ.ಡಿ.ಓ, ಯಂಟಗಾನಹಳ್ಳಿ ಗ್ರಾಮ ಪಂಚಾಯಿತಿ ಇವರು ದಿ:11-11-2014ರಂದು ಮಧುಮತಿ.ಎಂ. ಅವರಿಗೆ ಕಟ್ಟಡದ ಬಗ್ಗೆ ತಕರಾರು ಬಂದ ಕಾರಣ ದಾಖಲೆಗಳನ್ನು ಸಲ್ಲಿಸುವಂತೆ ನೋಟೀಸು ನೀಡಿದ ಪ್ರತಿ ಲಭ್ಯವಿರುತ್ತದೆ. ಆದರೆ ಅನಂತರ ಯಾವ ಕ್ರಮ ಕೈಗೊಳ್ಳಲಾಯಿತು ಎನ್ನುವ ಬಗ್ಗೆ ಯಾವುದೇ ದಾಖಲಾತಿಗಳು ಲಭ್ಯವಿರುವುದಿಲ್ಲ ಹಾಗೂ ಎದುರುದಾರರು ಆಕ್ಷೇಪಣೆಯನ್ನು ಸಹ ಸಲ್ಲಿಸಿರುವುದಿಲ್ಲವೆಂದು ವರದಿಸಿರುತ್ತಾರೆ.

ಲಭ್ಯವಿದ್ದ ದಾಖಲಾತಿಗಳ ಆಧಾರದ ಮೇಲೆ ನೋಡುವುದಾದರೆ, ಸಾರ್ವಜನಿಕ ಚರಂಡಿಯ ಮೇಲೆ ಶ್ರೀಮತಿ ಎಂ.ಮಧುಮತಿ ಅವರು ಮನೆ ಕಟ್ಟುತ್ತಿದ್ದರೂ ಸಹ 1ನೇ ಮತ್ತು 2ನೇ ಎದುರುದಾರರು ಕಾನೂನುರೀತ್ಯಾ ಕ್ರಮಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆಂದು ಕಂಡು ಬರುತ್ತದೆ. ಅಲ್ಲದೆ ಎದುರುದಾರರು ದೂರುದಾರರ ಆಪಾದನೆಗಳಿಗೆ ಆಕ್ಷೇಪಣೆ ಸಲ್ಲಿಸದ ಕಾರಣ ಎದುರುದಾರರು ದೂರುದಾರರ ಆಪಾದನೆಗೆ ಸ್ಪಂದಿಸಿಲ್ಲವೆಂದು ಒಪ್ಪಿಕೊಂಡಂತಾಗಿರುತ್ತದೆ. ಆದ್ದರಿಂದ ಎದುರುದಾರರು ತಮ್ಮ ಕರ್ತವ್ಯದಲ್ಲಿ ಲೋಪವೆಸಗಿದ್ದಾರೆಂದು, ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುವುದಾಗಿ ವರದಿಸಿರುತ್ತಾರೆ.

1ನೇ ಎದುರುದಾರರಾದ ಶ್ರೀ ಸಿ.ಶಂಕರಪ್ಪ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ನೆಲಮಂಗಲ 2ನೇ ಎದುರುದಾರರಾದ ಶ್ರೀ ಸೀತಾರಾಮು, ಪಿ.ಡಿ.ಓ, ಯಂಟಗಾನಹಳ್ಳಿ ಗ್ರಾಮ ಪಂಚಾಯಿತಿ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಸದರಿ ಅಧಿಕಾರಿಯು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)ರ (i),(ii) ಮತ್ತು (iii) ಅಡಿಯಲ್ಲಿ ದುರ್ನಡತೆ ಎಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಮಾಡಿರುವ ಶಿಫಾರಸ್ಸಿನ ಅನ್ವಯ, ಆಪಾದಿತ ಅಧಿಕಾರಿಯ ವಿರುದ್ಧ ಕರ್ತವ್ಯಲೋಪದ ಕುರಿತು ಶಿಸ್ತುಕ್ರಮ ಕೈಗೊಳ್ಳಲು ಕೆ.ಸಿ.ಎಸ್.ಆರ್. ನಿಯಮ 214(2)(ಬಿ) ರನ್ವಯ 1ನೇ ಎದುರುದಾರರ ಶ್ರೀ ಸಿ.ಶಂಕರಪ್ಪ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ನೆಲಮಂಗಲ ಇವರ ವಿರುದ್ಧ ಮತ್ತು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು-1957ರ ನಿಯಮ-11 ಹಾಗೂ 2ನೇ ಎದುರುದಾರರಾದ

ಶ್ರೀ ಸೀತಾರಾಮು, ಪಿಡಿಓ, ಯಂಟಗಾನಹಳ್ಳಿ ಗ್ರಾಮ ಪಂಚಾಯಿತಿ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು-1957ರ ನಿಯಮ-11 ಮತ್ತು ಅದೇ ನಿಯಮದ 14(ಎ) ರಡಿಯಲ್ಲಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲು ಕೋರಿರುತ್ತಾರೆ.

ಸದರಿ ಪ್ರಕರಣವನ್ನು ಪರಿಶೀಲಿಸಲಾಗಿ 1ನೇ ಎದುರುದಾರರಾದ ಶ್ರೀ ಸಿ.ಶಂಕರಪ್ಪ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ನೆಲಮಂಗಲ 2ನೇ ಎದುರುದಾರರಾದ ಶ್ರೀ ಸೀತಾರಾಮು, ಪಿಡಿಓ, ಯಂಟಗಾನಹಳ್ಳಿ ಗ್ರಾಮ ಪಂಚಾಯಿತಿ ಇವರುಗಳು ಸರ್ಕಾರಿ / ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಸದರಿ ಅಧಿಕಾರಿ/ನೌಕರರು ಇವರುಗಳು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)ರ (i),(ii) ಮತ್ತು (iii) ಅಡಿಯಲ್ಲಿ ದುರ್ನಡತೆ ಎಸಗಿದ್ದು, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು-1957ರ ನಿಯಮ-11 ಮತ್ತು ಅದೇ ನಿಯಮದ 14(ಎ) ರಡಿಯಲ್ಲಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 144 ವಿಸೇಬಿ 2017,ಬೆಂಗಳೂರು ದಿನಾಂಕ:30-06-2017</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ 1ನೇ ಎದುರುದಾರರಾದ ಶ್ರೀ ಸಿ.ಶಂಕರಪ್ಪ (ಪ್ರಸ್ತುತ ನಿವೃತ್ತ), ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ನೆಲಮಂಗಲ ಇವರಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿ 1957ರ ನಿಯಮ 214 (2) (ಬಿ)(1) ರಡಿ ಅನುಮತಿ ನೀಡುತ್ತಾ, 2ನೇ ಎದುರುದಾರರಾದ ಶ್ರೀ ಸೀತಾರಾಮು, ಪಿ.ಡಿ.ಓ, ಯಂಟಗಾನಹಳ್ಳಿ ಗ್ರಾಮ ಪಂಚಾಯಿತಿ ಇವರುಗಳ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14 (ಎ)ರ ಪ್ರಕಾರ ಮಾನ್ಯ ಉಪ ಲೋಕಾಯುಕ್ತ, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

30/06/2017

(ಎಸ್ ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ&ಸಿ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

<u>ಇವರಿಗೆ,</u>

1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ,ಬಹುಮಹಡಿ ಕಟ್ಟಡ, ಬೆಂಗಳೂರು-01

<u>ಪ್ರತಿ ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.